ದಿನಾಂಕಃ **21-06-2022** ಪಿಡಬ್ಲ್ಯೂ:1

ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದಃ**

ನನ್ನ ತಂದೆಯ ಹೆಸರು ಹೆಚ್ ಮೊಯಿದಿನ್ ಬ್ಯಾರಿ. ನನ್ನ ಮದುವೆಗೂ ಮೊದಲು ಮಾತುಕತೆಯಲ್ಲಿ 2 ಲಕ್ಷ ರೂಪಾಯಿ ಹಣ, 30 ಪವನ್ ಚಿನ್ನವನ್ನು ವರದಕ್ಷಿಣೆಯಾಗಿ ಕೇಳಿರುತ್ತಾರೆ. ಮದುವೆಯಲ್ಲಿ 1 ಲಕ್ಷ ರೂಪಾಯಿ ಹಣ ಮತ್ತು 20 ಪವನ್ ಚಿನ್ನವನ್ನು ನೀಡಿರುತ್ತಾರೆ. ಎದುರುದಾರರು ವರದಕ್ಷಿಣೆ ಕಮ್ಮಿಯಾಯಿತು ಎಂದು ಹೇಳಿ ಕಿರುಕುಳ ನೀಡಿರುತ್ತಾರೆ. ಎದುರುದಾರರು ಆತಿಕಾ ಎನ್ನುವವರ ಜೊತೆ 2 ನೇ ಮದುವೆಯಾಗಿದ್ದಾರೆ. ಸದ್ರಿ ಮದುವೆಗೆ ನಾನು ಒಪ್ಪಿಗೆ ನೀಡಿಲ್ಲ. ನನಗೆ ಮಕ್ಕಳಾಗದಿದ್ದ ಕಾರಣ ನಾನು ಒಪ್ಪಿಗೆ ನೀಡಿದ ಮೇರೆಗೆ ಎದುರುದಾರರು 2 ನೇ ಮದುವೆಯಾಗಿರುವುದಾಗಿ ಹೇಳಿರುವುದು ಸುಳ್ಳು. ನನ್ನ ಗಂಡನ 2 ನೇ ಹೆಂಡತಿ ಉಳ್ಳಾಲದವರಾಗಿರುತ್ತಾರೆ. ನನ್ನ ಗಂಡ ನನ್ನನ್ನು ಮತ್ತು ನನ್ನ ಮಗಳನ್ನು ಬಿಟ್ಟು 2 ನೇ ಪತ್ನಿಯೊಂದಿಗೆ ವಾಸವಾಗಿರುತ್ತಾರೆ. ಮೊದಲಿನಿಂದಲೂ ಎದುರುದಾರರು 2 ನೇ ಪತ್ನಿಯೊಂದಿಗೆ ಅಬುದಾಬಿನಲ್ಲಿ ವಾಸವಾಗಿದ್ದಾರೆ.

ನನಗೆ ಯಾವುದೇ ಉದ್ಯೋಗವಿರುವುದಿಲ್ಲ. ನನ್ನ ಗಂಡನಿಗೆ ತಿಂಗಳಿಗೆ 1 ಲಕ್ಷ ರೂಪಾಯಿ ಆದಾಯವಿರುತ್ತದೆ. ನನ್ನ ಮಗಳು ಪ್ಯಾರ ಮೆಡಿಕಲ್ ಕಲಿಯುತ್ತಿದ್ದಾಳೆ. ಜೀವನಾಂಶ ಇಲ್ಲದೆ ನನಗೆ ಮತ್ತು ನನ್ನ ಮಗಳಿಗೆ ಜೀವನ ನಡೆಸಲು ತುಂಬಾ ಕಷ್ಟವಾಗುತ್ತದೆ. ನನ್ನ ಮಗಳಿಗೆ ನನ್ನಿಂದ ವಿದ್ಯಾಭ್ಯಾಸ ಕೊಡಿಸಲು ಸಾಧ್ಯವಾಗುತ್ತಿಲ್ಲ. ಎದುರುದಾರ ತಮ್ಮ ಉತ್ತರದಲ್ಲಿ ಹಣ ಇಲ್ಲ ಎಂದು ಸುಳ್ಳು ಹೇಳಿರುತ್ತಾರೆ. ನನಗೆ ತಿಂಗಳಿಗೆ 30 ಸಾವಿರ ಮತ್ತು ಮಗಳಿಗೆ 10 ಸಾವಿರ ರೂಪಾಯಿಗಳ ಜೀವನಾಂಶವನ್ನು ಅರ್ಜಿ ಸಲ್ಲಿಸಿದ ದಿನಾಂಕದಿಂದ ನೀಡಬೇಕಾಗಿ ಕೋರಿಕೊಳ್ಳುತ್ತೇನೆ. ನಾನು ಪೋಟೋಗಳನ್ನು ಹಾಜರುಪಡಿಸಿರುತ್ತೇನೆ. ನಾನು ಪೊಲೀಸ್ ಠಾಣೆಯಲ್ಲಿ ಎದುರುದಾರರ ವಿರುದ್ದ ದೂರು ಕೊಟ್ಟಿದ್ದು, ಅದರಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಸದ್ರಿ ಪ್ರಕರಣವು ಇದೇ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. ಆದುದರಿಂದ ಈ ಅರ್ಜಿಯಲ್ಲಿ ಆದೇಶಿಸಿದಂತೆ ಕೋರಿರುತ್ತೇನೆ.

**ಎದುರುದಾರರ ಪರ ವಕೀಲರು ಗೈರು ಹಾಜರು ಇದ್ದು, ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ